## ನಿಮ್ಮೊಡನೆ

# ಬೆಲೆ ಏರಿಕೆ ಎಂಬ ಮಾರಿ

**ಅಧಿಕ ಉತ್ಪಾದನೆ ಮಾರುಕಟ್ಟೆಗೆ ಬಂದಾಗಲೂ ಅದನ್ನು ಬಚ್ಚಿಟ್ಟುಕೊಂಡು ಕೃತಕ ಕೊರತೆ ಸೃಷ್ಟಿಸುವ ವ್ಯಾಪಾರಿಗಳಿದ್ದಾರೆ. ಇದರಿಂದ ಬೆಲೆ ಗಗನಕ್ಕೇರುತ್ತವೆ. ಸರ್ಕಾರಗಳು ಈ ಅಟ್ಟಹಾಸವನ್ನು ಅಸಹಾಯಕವಾಗಿ ನೋಡುತ್ತಿವೆ!**

ಬೆಲೆ ಏರಿಕೆಯಿಂದ ಜನಸಾಮಾನ್ಯರು ತತ್ತರಿಸಿ ಹೋಗಿರುವುದು ನಿತ್ಯದ ವಿದ್ಯಮಾನವಾಗಿದೆ. ಕಠಿಣ ಕಾಲದ ಯಾವುದೋ ಒಂದು ಸಂದರ್ಭದಲ್ಲಿ ಬೆಲೆಗಳು ಆರ್ಭಟಿಸಿ, ಮತ್ತೆ ಹಿಡಿತಕ್ಕೆ ಬರುವ ದಿನಗಳು ಈಗ ಉಳಿದಿಲ್ಲ. ನಿನ್ನೆಯ 'ಬೆಲೆ' ಇಂದಿಲ್ಲ. ಇಂದಿನದು ನಾಳೆಗಿಲ್ಲ. ಏರುವುದೇ ಅದರ ಜಾಯಮಾನವಾಗಿದೆ. ಇಳಿಯುತ್ತಿರುವುದು ಮನುಷ್ಯನ 'ಬೆಲೆ' ಅಷ್ಟೆ.

ಎಲ್ಲವನ್ನೂ ನಿಯಂತ್ರಿಸಬೇಕಾದ ರಾಜಕೀಯ ವ್ಯವಸ್ಥೆ ಅಸಹಾಯಕವಾಗಿದೆ– ಅಷ್ಟೇ ಅಲ್ಲ, ಬೆಲೆ ಏರಿಕೆಗೆ ಪೂರಕವಾಗೇ ಇದೆ! ದೇಶದ ಒಟ್ಟು ಉತ್ಪಾದನೆಗೆ ಅನುಗುಣವಾಗಿ ಹಣದ ಪ್ರಮಾಣವನ್ನು ಪೂರೈಸಬೇಕಾದ ಕೇಂದ್ರಸರ್ಕಾರ ಅದಕ್ಕೆ ವ್ಯತಿರಿಕ್ತವಾಗಿ ವರ್ತಿಸುತ್ತಿದೆ. ಹತ್ತು ಕೆಜಿ ಅಕ್ಕಿ ಉತ್ಪಾದನೆಗೆ ಪ್ರತಿಯಾಗಿ ಹಣದ ಪ್ರಮಾಣವನ್ನು ನೂರು ರೂಪಾಯಿ ಪೂರೈಸಿದರೆ, ಆಗ ಸಾಮಾನ್ಯ ಜನತೆಗೆ ಹತ್ತು ರೂ.ಗೆ. ಕೆಜಿ ಅಕ್ಕಿ ಲಭಿಸುತ್ತದೆ. ಸಮತೋಲನದ ಒಂದು ಪ್ರಮಾಣವನ್ನು ಸರ್ಕಾರ ಕಾಪಾಡಿಕೊಳ್ಳಬೇಕಾಗುತ್ತದೆ. ಆದರೆ ಅದಾಗುತ್ತಿಲ್ಲ. ನೂರು ರೂಪಾಯಿ ಮಾತ್ರ ಮುದ್ರಿಸಬೇಕಾದ ಕಡೆ ಐನೂರು ರೂ. ನೋಟುಗಳನ್ನು ಅಚ್ಚುಹಾಕಿದರೆ ಅಕ್ಕಿ ಬೆಲೆ ಕೆಜಿಗೆ ಐವತ್ತು ರೂಪಾಯಿ ಆಗುತ್ತದೆ. ಹಣದುಬ್ಬರಕ್ಕೆ ಕಡಿವಾಣ ಇಲ್ಲದಾಗುತ್ತದೆ.

ಆಡಳಿತದ ವೆಚ್ಚ ನಿರಂತರವಾಗಿ ಹೆಚ್ಚುತ್ತಿದೆ. ಉದಾಹರಣೆಗೆ ನೂರು ರೂಪಾಯಿ ಆದಾಯ ಇದ್ದರೆ, ಅಷ್ಟೇ ಪ್ರಮಾಣದ ವೆಚ್ಚ ಮಾಡಬೇಕು. ಆದರೆ ವೆಚ್ಚವು ಆದಾಯವನ್ನು ನೊಣೆದು ಹಾಕುವ ರಾಕ್ಷಸವಾಗುತ್ತಿದೆ. ಇದನ್ನು ಸರಿದೂಗಿಸಲೂ ಸಹ ಸರ್ಕಾರ ಹೆಚ್ಚು ನೋಟುಗಳನ್ನು ಮುದ್ರಿಸುವುದರ ಮೊರೆ ಹೋಗುತ್ತದೆ! ಇದರಿಂದ ವಿತ್ತೀಯ ಕೊರತೆ ಸಹಜವಾಗಿ ಉಂಟಾಗುತ್ತದೆ.

ಸಾಲ ಮನ್ನಾ, ಅಗ್ಗದ ದರದಲ್ಲಿ ಅಕ್ಕಿ ಪೂರೈಕೆಯಂತಹ ರೈತರ ಹಾಗೂ ಬಡವರ ಪರ ಕಾರ್ಯಕ್ರಮಗಳಿಗೆ ಸರ್ಕಾರಗಳು ಹೆಚ್ಚಿನ ಸಹಾಯಧನ ಭರಿಸಬೇಕು. ಹೀಗೆ ಮೇಲಿಂದ ಮೇಲೆ ಸಹಾಯಧನ ನೀಡುತ್ತಲೇ ಇರುವುದಕ್ಕೆ ಸರ್ಕಾರದ ಬಳಿ ಇರುವ ಆದಾಯದ ಮೂಲಗಳು ಯಾವುವು?

ಆಹಾರಧಾನ್ಯಗಳ ಕೃತಕ ಕೊರತೆ ಸೃಷ್ಟಿಯೂ ಬೆಲೆ ಏರಿಕೆಗೆ ಮತ್ತೊಂದು ಪ್ರಮುಖ ಕಾರಣ. ಉತ್ಪಾದಿತ ವಸ್ತುಗಳು ಅಧಿಕ ಪ್ರಮಾಣದಲ್ಲಿ ಇರುವಾಗಲೂ ಅದನ್ನು ಬಚ್ಚಿಟ್ಟುಕೊಂಡು ಕೊರತೆ ಸೃಷ್ಟಿಸುವ ವ್ಯಾಪಾರಿಗಳ ಮೇಲೆ ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಹಿಡಿತ ಇಲ್ಲವಾಗಿದೆ. ಕೃತಕ ಕೊರತೆ ಉಂಟುಮಾಡುವವರನ್ನು ಹದ್ದುಬಸ್ತಿನಲ್ಲಿಡುವ ರಾಜಕೀಯ ಇಚ್ಛಾಶಕ್ತಿಯನ್ನು ಸರ್ಕಾರಗಳು ಪ್ರದರ್ಶಿಸುತ್ತಿಲ್ಲ. ತರಕಾರಿ, ಹಣ್ಣು ಮುಂತಾದುವುಗಳ ಬೆಲೆ ಏರಿಕೆಗೆ ಅಂತರ್ಜಲ, ಮಳೆ ಕೊರತೆಯಂತಹ ಸಾಂದರ್ಭಿಕ ಕಾರಣಗಳಿವೆ. ಹಾಗಾಗಿ ಇವುಗಳ ಬೆಲೆಯಲ್ಲಿ ಏರಿಳಿವು ಇರುತ್ತದೆ.

ಆಹಾರಧಾನ್ಯ, ಕಟ್ಟಡ ಸಾಮಗ್ರಿ, ಹಣ್ಣು ತರಕಾರಿ ಸೇರಿದಂತೆ ಎಲ್ಲ ಅವಶ್ಯಕ ವಸ್ತುಗಳ ಬೆಲೆ ಏರಿಕೆಗೆ ಪೆಟ್ರೋಲ್, ಡೀಸೆಲ್ ಬೆಲೆಗಳ ನಿರಂತರ ಏರಿಕೆಯೂ ಮತ್ತೊಂದು ಪ್ರಮುಖ ಕಾರಣ. ಪ್ರಯಾಣ ಹಾಗೂ ಅವಶ್ಯಕ ವಸ್ತುಗಳ ಸರಬರಾಜಿಗೆ ಬಸ್ಸು ಹಾಗೂ ಲಾರಿಗಳೇ ಆಧಾರ. ಡೀಸೆಲ್ ಇವುಗಳ ಪ್ರಮುಖ ಇಂಧನ. ಆದರೆ ಡೀಸೆಲ್ ಬಳಕೆ ಇಂದು ಲಾರಿ, ಬಸ್‌ಗಳಿಗಷ್ಟೇ ಸೀಮಿತವಾಗಿಲ್ಲ. ಆಟೊಮೊಬೈಲ್ ಕಂಪೆನಿಗಳು ಒಂದರ ಹಿಂದೆ ಒಂದರಂತೆ ಡೀಸೆಲ್ ಬಳಕೆಯ ಐಷಾರಾಮಿ ವಾಹನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿವೆ. ಕೆಲವರ ಭೋಗದ ಜೀವನಕ್ಕಾಗಿ ಡೀಸೆಲ್‌ಗೆ ನೀಡುವ ಸಹಾಯಧನ ದುರ್ಬಳಕೆ ಆಗುತ್ತಿದೆ.

ದುಡಿಯುವ ಕೈಗಳಿಗೆ ಭಿಕ್ಷೆ ಬೇಕಿಲ್ಲ, ಕೈತುಂಬಾ ಕೆಲಸ ಬೇಕು. ರೈತರ ಬೆಳೆಗಳಿಗೆ ಅವರು ಮಾಡಿದ ವೆಚ್ಚ ಹಾಗೂ ತೊಡಗಿಸಿದ ಪರಿಶ್ರಮಕ್ಕೆ ತಕ್ಕುದಾದ ಬೆಲೆ ಬೇಕೇ ಹೊರತು, ಸಾಲ ಮನ್ನಾ ಅಲ್ಲ. ಸರ್ಕಾರಿ ವೆಚ್ಚಕ್ಕೆ ಕಡಿವಾಣ ಹಾಕಬೇಕು. ಹಣದುಬ್ಬರ ನಿಯಂತ್ರಿಸಬೇಕು. ಎಲ್ಲವೂ ಒಂದಕ್ಕೊಂದು ಅಂತರ್ಸಂಬಂಧ ಹೊಂದಿವೆ. ಯಾವುದೇ ಒಂದು ವಿಭಾಗವನ್ನು ಸರ್ಕಾರ ಸಮರ್ಪಕವಾಗಿ ನಿಭಾಯಿಸದೇ ಹೋದರೂ ಅದರ ಪರಿಣಾಮ ಬೆಲೆ ಏರಿಕೆ. ರಾಜಕೀಯ ಸಂಕಲ್ಪವನ್ನು ತೋರದೇ ಹೋದರೆ ಬೆಲೆ ಏರಿಕೆ ಎಂಬ ಈ ಹುಚ್ಚುಕುದುರೆಯ ಓಟಕ್ಕೆ ಕಡಿವಾಣ ಹಾಕುವುದು ಸಾಧ್ಯವಿಲ್ಲ. ಬೆಲೆ ಏರಿಕೆ 'ಮಾರಿ' ಇದ್ದಂತೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ನುಂಗಿ ನೊಣೆಯುವ ಶಕ್ತಿ ಅದಕ್ಕಿದೆ. ಈ ಮಾರಿಯನ್ನು ಒದ್ದು ಓಡಿಸದಿದ್ದರೆ ಜನ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಬಗ್ಗೆ ವಿಶ್ವಾಸವನ್ನೇ ಕಳೆದುಕೊಳ್ಳುತ್ತಾರೆ.

■ ಗುಡಿಹಳ್ಳಿ ನಾಗರಾಜ



ಈಶ್ವರ್